**ಓ.ಎಸ್. ನಂ. 22/2021** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 19.7.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಹೆಚ್.ಜಿ.ವಿ ವಕೀಲರಿಂದಃ

ಈಗ ನೋಡುತ್ತಿರುವ ಸರ್ವೆ ನಂ.17/5 ರ ಪಹಣಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಸದರಿ ಪಹಣಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ25 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಇನ್ನೊಂದು ಸರ್ವೆ ನಂ.17/6 ರ ಪಹಣಿಯು ಪಿ.ಆರ್.ಪಳನಿಸ್ವಾಮಿಯವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಸದರಿ ಪಹಣಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ26 ಎಂದು ಗುರುತಿಸಲಾಯಿತು. ಯರಹಳ್ಳಿ ಗ್ರಾಮದ ಸರ್ವೆ ನಂ.17 ರಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ತಲಾ 27 ಗುಂಟೆ ಜಮೀನು ವಿಭಾಗದಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಯರಹಳ್ಳಿ ಗ್ರಾಮದ ಸರ್ವೆ ನಂ.17 ರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಸದರಿ ಆಸ್ತಿಯ ದಾಖಲಾತಿಯು ಸಿಕ್ಕಿರಲಿಲ್ಲ ಎನ್ನುವರು. 2 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಪಳನಿಸ್ವಾಮಿರವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿತ್ತು, ಉದ್ದೇಶಪೂರ್ವಕವಾಗಿ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಯರಹಳ್ಳಿ ಗ್ರಾಮದ ಅಸೆಸಮೆಂಟ್ ನಂ.44 ವಾಸದ ಮನೆಯಾಗಿದ್ದು ಅದರಲ್ಲಿ ವಾದಿ ಪ್ರತಿವಾದಿಯರು ವಾಸವಾಗಿರುತ್ತಾರೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಅದರ ದಾಖಲಾತಿಯು ಇರುವುದಿಲ್ಲ ಎನ್ನುವರು. ಸದರಿ ಮನೆಯಲ್ಲಿ ಈಗ 10 ರಿಂದ 12 ನೇ ಪ್ರತಿವಾದಿಯರು ಮಾತ್ರ ವಾಸವಾಗಿರುತ್ತಾರೆ ಎಂದರೆ ಸರಿ. 1981 ರ ವಿಭಾಗಪತ್ರದ ಪ್ರಕಾರ ಎಲ್ಲರ ಹೆಸರಿನಲ್ಲಿ ಪ್ರತ್ಯೇಕವಾಗಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

3 ರಿಂದ 9 ನೇ ಪ್ರತಿವಾದಿ ಪರ ವಕೀಲರು ಹಿಂದೆ ಮಾಡಿದ ಪಾಟೀ ಸವಾಲನ್ನು ಮುಂದುವರಿದು ಅಳವಡಿಸಿಕೊಳ್ಳುವುದಾಗಿ 2 ನೇ ಪ್ರತಿವಾದಿ ಪರ ವಕೀಲರು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.